**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಮುಳಬಾಗಿಲು.**

**ಸಿ. ಸಿ. ಸಂಖ್ಯೆಃ 85/2018**

ದಿನಾಂಕಃ 07.03.2026

| | | |
|---|---|---|
| ಹೆಸರುಃ | ಮೆಹಬೂಬ್ ಪಾಷ | ಸಿ.ಡಬ್ಲ್ಯೂಃ 03 |
| ತಂದೆಯ ಹೆಸರು | ಜಬ್ಬಾರ್ ಸಾಬ್ | ಪಿ. ಡಬ್ಲ್ಯೂಃ 02 |
| ವಯಸ್ಸು | 41 ವರ್ಷ | |
| ಕೆಲಸ | ಚಾಲಕ | ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ | ಮುಳಬಾಗಿಲು | |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ಚಾಸಾ-2 ರವರು ಗೊತ್ತು. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನ ಮುಂದೆ ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯೂ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿ.ಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ 1(ಬಿ) ಎಂದು ಗುರುತಿಸಲಾಯಿತು. ನಿ.ಪಿ 1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನನ್ನು ಪೋಲಿಸರು ವಿಚಾರಣೆ ಮಾಡಿ ನನ್ನ ಹೇಳಿಕೆ ದಾಖಲಿಸಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

***ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ***

ದಿ. 19.02.2017 ರಂದು 1 ನೇ ಆರೋಪಿಯ ಮನೆಯ ಬಳಿ ನನ್ನ ಮತ್ತು ಚಾಸಾ–2 ರವರ ಸಮಕ್ಷಮ ರಾತ್ರಿ 7.40 ರಿಂದ 8.30 ರವರೆಗೆ ಪೋಲಿಸರು ಅಮಾನತ್ತು ಮಹಜರು ಜರುಗಿಸಿ 36 ರಾಜ ವಿಸ್ಕಿಯಾ ಟೆಟ್ರಾ ಪ್ಯಾಕ್ ಗಳನ್ನು, 8 ಪಿ ಎಂ ನ 180 ಎಂ ಎಲ್ ನ 5 ಟೆಟ್ರಾ ಪ್ಯಾಕೆಟ್ ಗಳನ್ನು, ಓಲ್ಡ್ ಟ್ರಾವೇಲ್ ನ 180 ಎಂ ಎಲ್ ನ 6 ಟೆಟ್ರಾ ಪ್ಯಾಕೆಟ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಿ. 19.02.2017 ರಂದು ಈಗ ಓದಿ ಹೇಳಿದಂತೆ ತನಿಖಾಧಿಕಾರಿಯವರಿಗೆ ವಿವರವಾದ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕಯನ್ನು ನಿಪಿ–3 ಎಂದು ಗುರುತಿಸಲಾಯಿತು. ನಿಪಿ–1 ಮತ್ತು 3 ರ ಕುರಿತು  ಸಂಪೂರ್ಣ ಮಾಹಿತಿ ಇದ್ದರೂ ಕೂಡ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಗೌಡ ಜಗದೀಶ ರುದ್ರೇ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.